ಸಾಕ್ಷಿಯ ಹೆಸರುಃ ಎಸ್.ಎಲ್.ಗೌಡಪ್ಪ

ದಿನಾಂಕಃ 23-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರಿದ ಪಾಟೀ ಸವಾಲುಃ
ಆರೋಪಿ ಪರ ಶ್ರೀ ಬಿ.ಕೆ.ಎನ್. ವಕೀಲರಿಂದಃ

6) ಮೋಹನ್ ಕುಮಾರ್ ರವರ ಕುಟುಂಬದಲ್ಲಿ ಯಾರ್ಯಾರು ವಾಸವಾಗಿದ್ದಾರೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನನಗೆ ಆರೋಪಿ ಸಂಬಂಧಿ ಅಲ್ಲ. ಆರೋಪಿಯ ತಂದೆ ಸಿ.ಕೆ.ರಾಜಣ್ಣ ನನಗೆ ಆಪ್ತರು ಸಾಕ್ಷಿ ಅವರ ಜಮೀನು ನಮ್ಮ ಜಮೀನು ಪಕ್ಕದಲ್ಲಿರುವುದರಿಂದ ಪರಿಚಯ ಎನ್ನುತ್ತಾರೆ. ಆದ್ದರಿಂದ, ಅವರು ಮತ್ತು ನನ್ನ ಮಧ್ಯೆ ವ್ಯವಹಾರಗಳು ನಡೆಯುತ್ತಿದ್ದು, ಅವರು ನಮ್ಮ ಮನೆಗೆ ಬರುವುದು ಹೋಗುವುದು ಹಾಗೂ ನಾವು ಅವರ ಮನೆಗೆ ಬರುವುದು ಹೋಗುವುದು ಮಾಡುತ್ತಿದ್ದೆವು ಎಂದರೆ ಸಾಕ್ಷಿ ಅಪರೂಪಕ್ಕೆ ಬಂದು ಹೋಗಿ ಮಾಡುತ್ತಿದ್ದರು ಎನ್ನುತ್ತಾರೆ.

7) ಆ ದಿನ ನನ್ನ ಬಳಿ ರೂ.4,25,000/- ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಈ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿ ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಾನು ಸಂಪೂರ್ಣ ರೂ.4,25,000/- ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿಯೇ ನೀಡಿರುತ್ತೇನೆ. ಆರೋಪಿಗೆ ಈ ಹಣವನ್ನು ಚೆಕ್ ಮೂಲಕ ಕೊಡಲು ತೊಂದರೆ ಇರಲಿಲ್ಲವೇ ಎಂದರೆ ಸಾಕ್ಷಿ ನಾನು ಹಣವನ್ನು ಹೊಂದಿಸಿ ಕೊಡುತ್ತೇನೆ ಎಂದು ಹೇಳಿದ್ದೆ ಎನ್ನುತ್ತಾರೆ. ನಾನು ಆರೋಪಿಗೆ ದಿನಾಂಕಃ13.10.2020 ರಂದು ಸಂಜೆ 4.00 ಗಂಟೆ ಸುಮಾರಿಗೆ ಹಣವನ್ನು ಕೊಟ್ಟಿರುತ್ತೇನೆ. ಯಾವುದೇ ಒಡವೆಗಳನ್ನು ಬ್ಯಾಂಕಿನಲ್ಲಿ ಅಡಮಾನವಾಗಿ ಇಟ್ಟು ಸಾಲ ಪಡೆದಾಗ ಬಡ್ಡಿ ಕೊಡಬೇಕಾಗುತ್ತದೆ ಎಂದರೆ ಸರಿ. ಬ್ಯಾಂಕಿನವರು ಶೇ.7 ರಷ್ಟು ಬಡ್ಡಿಯನ್ನು ವಿಧಿಸುತ್ತಾರೆ.

8) ನಿಪಿ01 ಕ್ಕೆ ಎಲ್ಲ ಬರವಣಿಗೆಯನ್ನು ಆರೋಪಿಯೇ ಮಾಡಿಕೊಂಡು ಬಂದು, ನನ್ನ ಮುಂದೆ ಸಹಿ ಮಾಡಿಕೊಟ್ಟಿರುತ್ತಾರೆ. ನಿಪಿ01 ರ ಮೇಲಿರುವ ಬರವಣಿಗೆ ಆರೋಪಿ ಬರೆದಿಲ್ಲ ಎಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲ ಆದರೆ ಅವರೇ ಬರೆದುಕೊಂಡು ಬಂದಿದ್ದರು ಎನ್ನುತ್ತಾರೆ. ನಿಪಿ01 ರ ಮೇಲಿರುವ ಬರವಣಿಗೆ ಮತ್ತು ಸಹಿಯನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ನಿಪಿ04 ಅಂಚೆ ಸ್ವೀಕೃತಿಯಲ್ಲಿರುವ ಸಹಿ ಯಾರದ್ದು ಎಂದು ನನಗೆ ಗೊತ್ತಿಲ್ಲ. ಆ ಸಹಿ ಆರೋಪಿಯ ಸಹಿ ಹೌದೋ ಇಲ್ಲವೋ ಎಂದು ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ04 ರ ಮೇಲಿರುವ ಸಹಿ ಆರೋಪಿಯ ನೈಜ ಸಹಿ ಎಂದರೆ ಸರಿಯಲ್ಲ. ನಿಪಿ01 ರ ಮೇಲಿರುವ ಸಹಿಯನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

9) ಸಾಕ್ಷಿಗೆ ಈಗ ಆರೋಪಿ ಪರ ಶ್ರೀ ಬಿ.ಕೆ.ಎನ್. ವಕೀಲರು ಸಲ್ಲಿಸಿದ್ದ ವಕಾಲತ್ತನ್ನು ತೋರಿಸಿ, ಅದರಲ್ಲಿರುವ ಆರೋಪಿಯ ಸಹಿಯೇ ನೈಜವಾದ ಸಹಿ ಎಂದು ಹೇಳಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ ಸಾಕ್ಷಿಗೆ ಈಗ ಆರೋಪಿ ಭಾ.ದಂ.ಸಂ.ಕಲಂ 313 ರಡಿಯಲ್ಲಿ ಪರೀಕ್ಷೆಗೆ ಒಳಪಡಿಸಿದಾಗ ಮಾಡಿದ ಸಹಿಯನ್ನು ತೋರಿಸಿದಾಗ, ಇದೆ ಆರೋಪಿಯ ನೈಜವಾದ ಸಹಿ ಎಂದು ಕೇಳಿದಾಗ ಸಾಕ್ಷಿ 4-5 ತರಹ ಸಹಿ ಮಾಡಬಹುದು ಎನ್ನುತ್ತಾರೆ. ನಿಪಿ01 ರ ಮೇಲಿರುವ ಆರೋಪಿಯ ಸಹಿ ಹಾಗೂ ನ್ಯಾಯಾಲಯದಲ್ಲಿರುವ ಆರೋಪಿಯ ಇತರೇ ಸಹಿಗಳನ್ನು ತುಲನೆ ಮಾಡಲು ಬರಹ ತಜ್ಞರಿಗೆ ಕಳುಹಿಸಿಕೊಡಲು ನಿಮ್ಮದೇನು ಅಭ್ಯಂತರವಿಲ್ಲವೇ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಬ್ಯಾಂಕಿನ ವ್ಯವಸ್ಥಾಪಕರನ್ನು ಸಾಕ್ಷಿಯಾಗಿ ಕರೆಯಿಸಿ ಆರೋಪಿಯ ಸಹಿಗಳನ್ನು ತುಲನೆ ಮಾಡಲು ನನ್ನದೇನು ಅಭ್ಯಂತರ ಇಲ್ಲ.

10) ನಮ್ಮ ಪರ ವಕೀಲರು ಬ್ಯಾಂಕಿನ ಕಾನೂನು ಸಲಹಾಗಾರರು ಎಂದರೆ ಸರಿ. ನಮ್ಮ ವಕೀಲರು ಎಸ್.ಬಿ.ಐ ಬ್ಯಾಂಕಿನ ಕಾನೂನು ಸಲಹಾಗಾರರು ಎಂದರೆ ನನಗೆ ಗೊತ್ತಿಲ್ಲ. ಅವರ ಶಿಫಾರಸ್ಸಿನ ಮೇರೆಗೆ ಸಹಿಯಲ್ಲಿ ವ್ಯತ್ಯಾಸವಿದ್ದರೂ ಸಹ, ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ಬ್ಯಾಂಕಿನ ವ್ಯವಸ್ಥಾಪಕರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನೇ ಬ್ಯಾಂಕಿನಲ್ಲಿ ಚಿನ್ನವನ್ನು ಅಡಮಾನವಾಗಿಟ್ಟು ಹಣವನ್ನು ಸಾಲವಾಗಿ ಪಡೆದಿದ್ದರಿಂದ, ಆರೋಪಿಗೆ ಸಾಲ ನೀಡಲು ನನಗೆ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಈ ಕೇಸನ್ನು ದಾಖಲು ಮಾಡುವ ಉದ್ದೇಶದಿಂದ ನಿಪಿ.06 ನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ನಾನು ನಿಪಿ. 06 ರಂತೆ ರೂ.4,25,000/-ಗಳನ್ನು ಡ್ರಾ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಸಾಕಷ್ಟು ಆದಾಯ ಇರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲದ ಕಾರಣ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2020 ರಲ್ಲಿ ಆರೋಪಿ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ಗ್ರಾಮೀಣ ಕೂಟದಲ್ಲಿ ಕ್ವಾಲಿಟಿ ಕಂಟ್ರೋಲರ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಅವರ ತಂದೆ-ತಾಯಿ ಪರಿಚಯಸ್ಥರು ಮತ್ತು ಅವರ ವ್ಯವಸಾಯಸ್ಥರು ಎನ್ನುತ್ತಾರೆ. ಆರೋಪಿಯ ಕುಟುಂಬಕ್ಕೆ ಸುಮಾರು 50-60 ಎಕರೆ ಜಮೀನು ಇದೆ. ಆರೋಪಿಗೆ ವಾರ್ಷಿಕವಾಗಿ ರೂ.20 ರಿಂದ 25 ಲಕ್ಷ ಆದಾಯ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವರಿಗೆ 20 ಎಕರೆ ತೋಟ ಇದೆ ಎಂದು ಜನ ಹೇಳುತ್ತಾರೆ.

11) ಆರೋಪಿಗೆ ನನ್ನಿಂದ ರೂ.4,25,000/-ಗಳ ಹಣವನ್ನು ಸಾಲವಾಗಿ ಪಡೆಯುವ ದರದ್ದು ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನದಂದು ಆರೋಪಿ ಗ್ರಾಮೀಣ ಕೂಟದಲ್ಲಿ ಕ್ವಾಲಿಟಿ ಕಂಟ್ರೋಲರ್ ಆಗಿ ಕೆಲಸ ಮಾಡುತ್ತಿದ್ದುದ್ದರಿಂದ ಅವರಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಕ್ಕದಲ್ಲಿರುವ ಅವರ 10 ಎಕರೆ ಜಮೀನನ್ನು ಕೊಳ್ಳಲು ಕೇಳಿದಾಗ, ಅವರು ನಿರಾಕರಿಸಿದ್ದರಿಂದ,

ಹೊಟ್ಟೆಕಿಚ್ಚಿನಿಂದ ಅವರ ವಿರುದ್ಧ ಈ ಸುಳ್ಳು ಕೇಸನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ತಂದೆ ಜೀವಿತ ಅವಧಿಯಲ್ಲಿ ನಾನು ಅವರ ಮನೆಗೆ ಹೋಗಿ ಬಂದು ಮಾಡುತ್ತಿರುವಾಗ, ಅವರ ಮನೆಯ ಟೇಬಲ್ ಮೇಲಿದ್ದ ಸಹಿ ಆಗದೇ ಇರುವ ಚೆಕ್ ಬುಕ್ ನಿಂದ ಒಂದು ಚೆಕ್ ಹಾಳೆಯನ್ನು ಹರಿದುಕೊಂಡು ಬಂದು ಈ ಸುಳ್ಳು ಕೇಸನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸದರಿ ಚೆಕ್‌ಗೆ ಬರವಣಿಗೆ ಮಾಡಿ ಸಹಿ ಮಾಡಿ, ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

12) ನಾನೇ ನಿಪಿ-06 ರಂತೆ ಸಾಲಗಾರನಾಗಿ ಬಡ್ಡಿ ಪಾವತಿ ಮಾಡುವುದರಿಂದ, ಆರೋಪಿಗೆ ನಾನು ಹಣ ನೀಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣ ನೀಡದೇ ಇರುವುದರಿಂದ ಯಾವುದೇ ವ್ಯಾಜ್ಯದ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣ ನೀಡದೇ ಇರುವುದರಿಂದ, ಅವರು ನನಗೆ ವಾಪಸ್ಸು ಹಣವನ್ನು ಕೊಡುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.